

ಕೆಲಸಗಾರರಿಲ್ಲದೇ ಕಳೆಗುಂದಿರುವ ಬೆಂಗೇರಿಯ ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘದ ಹೊಲಿಯುವ ಘಟಕ

‘ಮತ್ತೇನೂ ಬೇಡ. ಖಾದಿ ಬಟ್ಟೆ ಮತ್ತು ಗ್ರಾಮದಲ್ಲಿ ಉದ್ಯೋಗ ಇದ್ದರೆ ಸಾಕು, ನಮ್ಮ ದೇಶ ಯಾರಿಗೂ ಬಾಗಬೇಕಿಲ್ಲ. ಯಾರನ್ನೂ ಅವಲಂಬಿಸಬೇಕಿಲ್ಲ. ಆರ್ಥಿಕ ಸಮಸ್ಯೆಯೂ ಇರಲ್ಲ. ನಿರುದ್ಯೋಗ ಸಮಸ್ಯೆಯೂ ಕಾಡಲ್ಲ. ಖಾದಿ ಎಂದರೆ ಬರೀ ಬಟ್ಟೆಯಲ್ಲ. ಅದು ಒಗ್ಗಟ್ಟು ಮತ್ತು ಸರಳತೆಯ ಸಂಕೇತ. ಸಾಮಾಜಿಕ ಮತ್ತು ಆರ್ಥಿಕ ಸ್ವಾವಲಂಬನೆಯ ಪ್ರತೀಕ’.

ಹೀಗೆ ಸ್ಪಷ್ಟ ನುಡಿಯಲ್ಲಿ ಹೇಳಿದವರು ಮಹಾತ್ಮ ಗಾಂಧೀಜಿ. ದೇಶವು ಸ್ವಾತಂತ್ರ್ಯದ ಗಾಳಿಯಲ್ಲಿ ಉಸಿರಾಡುವ ಮುನ್ನವೇ ಇದನ್ನು ಹೇಳಿದ ಗಾಂಧೀಜಿ ಅವರು, ಖಾದಿಯನ್ನೇ ಬ್ರಿಟಿಷರ ವಿರುದ್ಧ ಅಸ್ತ್ರವಾಗಿಸಿಕೊಂಡರು. ಇಂಗ್ಲಿಷರ ದಬ್ಬಾಳಿಕೆಗೆ ಗಾಂಧೀಜಿ ಅವರ ‘ಖಾದಿ ಉತ್ಪನ್ನ ಮತ್ತು ಬಳಕೆ’ಯೇ ಖಡಕ್ ಉತ್ತರವಾಗಿತ್ತು. ಕೊನೆಯವರೆಗೂ ಇದಕ್ಕೆ ಬದ್ಧರಾಗಿದ್ದರು.

ಇತ್ತೀಚಿನ ವರ್ಷಗಳಲ್ಲಿ ಆತ್ಮನಿರ್ಭರ ಮತ್ತು ‘ಮೇಡ್ ಇನ್ ಇಂಡಿಯಾ’ ಎಂಬ ಬಗ್ಗೆ ಸಾಕಷ್ಟು ಚರ್ಚೆ, ವಾದ–ವಿವಾದ ಎಲ್ಲವೂ ಆಗುತ್ತಿದೆ. ಆದರೆ, ಗಾಂಧೀಜಿಯ ಪ್ರಭಾವದಿಂದ ಸ್ವಾತಂತ್ರ್ಯ ಹೋರಾಟಗಾರರು ಆ ಕಾಲಘಟ್ಟದಲ್ಲೇ ಆತ್ಮನಿರ್ಭರದ ಸಂದೇಶ ನೀಡಿದ್ದರು. ಅದೇ ಅವರ ಬದುಕು ಆಗಿತ್ತು. ಸ್ವಾವಲಂಬನೆ ಕಂಡುಕೊಳ್ಳಲು ಕಾರಣವಾಗಿತ್ತು.

### ಹೆಮ್ಮೆಯ ರಾಯಭಾರಿ ಆಗಲಿಲ್ಲ

ನಿರೀಕ್ಷೆಯಂತೆ ಎಲ್ಲವೂ ನೆರವೇರಿದ್ದರೆ ಮತ್ತು ದಶಕಗಳಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರದ ನಿರಂತರ ಅನುದಾನ, ಪ್ರೋತ್ಸಾಹ ಸಿಕ್ಕಿದ್ದರೆ, ಈ ವೇಳೆಗೆ ಭಾರತವು ಖಾದಿಯ ಹೆಮ್ಮೆಯ ರಾಯಭಾರಿ ಆಗಿ ಮೆರೆಯಬೇಕಿತ್ತು. ಖಾದಿಯು ಪ್ರತಿಯೊಬ್ಬರ ಬದುಕಿನ ಭಾಗವಾಗಬೇಕಿತ್ತು. ಆದರೆ, ಸದ್ಯದ ಪರಿಸ್ಥಿತಿಯಲ್ಲಿ ಅದು ಮಹತ್ವ ಕಳೆದುಕೊಳ್ಳುತ್ತಿದೆ.

ಖಾದಿಯ ಸೊರಗುವಿಕೆಯನ್ನು ತಿಳಿದುಕೊಳ್ಳಲು ಹೆಚ್ಚೇನೂ ದೂರ ಹೋಗಬೇಕಿಲ್ಲ. ಧಾರವಾಡ ಜಿಲ್ಲೆ ಬೆಂಗೇರಿ ಮತ್ತು ಗರಗ ಗ್ರಾಮೋದ್ಯೋಗ ಕೇಂದ್ರಗಳಿಗೆ ಭೇಟಿ ನೀಡಿದರೆ ಸಾಕು. ಶಿಥಿಲ ಕಟ್ಟಡ, ಕನಿಷ್ಠ ಸೌಲಭ್ಯ, ಉದ್ಯೋಗಿಗಳ ಕೊರತೆ, ಸಿಗದ ಪ್ರೋತ್ಸಾಹ, ಮಾರಾಟವಾಗದ ಉತ್ಪನ್ನ ಮತ್ತು ನಿರಾಸೆಯ ಮುಖಗಳು ಎಲ್ಲವೂ ಕಣ್ಣಿಗೆ ರಾಚುತ್ತವೆ.

ಖಾದಿ ಉದ್ಯಮವನ್ನೇ ಆಶ್ರಯಿಸಿರುವ ಈ ಎರಡೂ ಗ್ರಾಮಗಳು ಇಡೀ ದೇಶಕ್ಕೆ ರಾಷ್ಟ್ರಧ್ವಜಗಳನ್ನು ಉತ್ಪಾದಿಸುತ್ತವೆ. ಇಲ್ಲಿನ ಧ್ವಜಗಳೇ ದೇಶದ ಸಂಸತ್ತು, ಕೆಂಪುಕೋಟೆ, ವಿಧಾನಸೌಧ ಆವರಣಗಳಲ್ಲಿ ಆರೋಹಣಗೊಳ್ಳುತ್ತವೆ. ವರ್ಷಗಳಿಂದ ನಡೆದುಕೊಂಡು ಬಂದ ಸಂಪ್ರದಾಯವಿದು. ಕನ್ನಡಿಗರ ಪಾಲಿಗೆ ಇದು ಹೆಮ್ಮೆಯ ವಿಷಯವೂ ಹೌದು.

ಖಾದಿಯಿಂದ ಉತ್ಪಾದಿಸಲಾಗುವ ರಾಷ್ಟ್ರಧ್ವಜಗಳಿಗೆ ಕಳೆದೆರಡು ವರ್ಷಗಳಿಂದ ದಿಢೀರನೇ ಬೇಡಿಕೆ ಕುಸಿದಿದೆ. ದೇಶದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಪ್ರಯುಕ್ತ 2023ರಲ್ಲಿ ಕೈಗೊಳ್ಳಲಾದ ‘ಹರ್ ಘರ್ ತಿರಂಗಾ’ (ಪ್ರತಿ ಮನೆಯಲ್ಲಿ ರಾಷ್ಟ್ರಧ್ವಜ) ಅಭಿಯಾನವು ಖಾದಿ ಧ್ವಜಗಳಿಗೆ ಸಂಭ್ರಮದ ಅಲೆಯಾಗುವ ಬದಲು ನಿರಾಸೆಯ ಕಾರ್ಮೋಡ ತಂದಿತು. ಈ ಅಭಿಯಾನದ ಭಾಗವಾಗಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು 2021ರ ಡಿಸೆಂಬರ್ 30ರಂದು ರಾಷ್ಟ್ರಧ್ವಜ ಬಳಕೆ, ಪ್ರದರ್ಶನ ಮತ್ತು ಆರೋಹಣಕ್ಕೆ ಸಂಬಂಧಿಸಿದಂತೆ ಕೆಲವಷ್ಟು ಮಹತ್ವದ ತೀರ್ಮಾನ ತೆಗೆದುಕೊಂಡಿತು. ವರ್ಷ 2002ರ ಧ್ವಜ ಸಂಹಿತೆಗೆ ತಿದ್ದುಪಡಿ ಮಾಡಿದ ಸರ್ಕಾರವು ರಾಷ್ಟ್ರಧ್ವಜ ಖಾದಿಯದ್ದೇ ಇರಬೇಕಿಲ್ಲ ಎಂದು ಹೇಳಿತು.

ಕೈ ಅಥವಾ ಚರಕದಿಂದ ನೂಲಿದ, ನೇಯ್ದ ಖಾದಿಯ ರಾಷ್ಟ್ರಧ್ವಜಗಳಷ್ಟೇ ಆರೋಹಣ ಮಾಡಬೇಕಿಲ್ಲ. ಯಂತ್ರದಿಂದ ಸಿದ್ಧಪಡಿಸಲಾದ ಹತ್ತಿ, ಪಾಲಿಯೆಸ್ಟರ್, ಉಣ್ಣೆ, ರೇಷ್ಮೆ ಅಥವಾ ಯಾವುದೇ ಬಟ್ಟೆಯಿಂದ ಸಿದ್ಧಪಡಿಸಲಾದ ಧ್ವಜಗಳನ್ನು ಹಾರಿಸಬಹುದು ಎಂದು ಸರ್ಕಾರ ಅವಕಾಶ ಕಲ್ಪಿಸಿತು. ಇದರ ಏಟಿಗೆ ಖಾದಿ ಉದ್ಯಮವೇ ನಲುಗಿ ಹೋಯಿತು.

## 40 ವರ್ಷಗಳಿಂದ ಖಾದಿಯದ್ದೇ ಕಾಯಕ



ಈಶ್ವರಪ್ಪ ಇಟಗಿ

‘ಚರಕ ಮತ್ತು ನೇಯ್ಗೆಯ ಶಬ್ದವನ್ನು ಕೇಳುತ್ತ ಬೆಳೆದವಳು ನಾನು. 40 ವರ್ಷಗಳಿಂದ ಇದೇ ಕೆಲಸ ಮಾಡುತ್ತಿದ್ದೇವೆ. ನನ್ನ ತಾಯಿ ಇದೇ ಗರಗ ಖಾದಿ ಸಂಘದಲ್ಲಿ ಕೆಲಸ ಮಾಡುತ್ತಿದ್ದರು. ನನ್ನನ್ನು ಬಟ್ಟೆಯ ಜೋಳಿಗೆಯಲ್ಲಿ ಮಲಗಿಸಿ, ಕೆಲಸ ಮಾಡುತ್ತಿದ್ದರು. ಆಗಿನಿಂದಲೇ ಕೇಳುತ್ತಿರುವ ಶಬ್ದ ಈಗಲೂ ಮುಂದುವರೆದಿದೆ. 40 ವರ್ಷಗಳಿಂದ ಇಲ್ಲಿಯೆ ಕೆಲಸ ಮಾಡುತ್ತಿದ್ದೇನೆ’ ಎಂದು ದಿಲ್‌ಶಾದ್ ಹೇಳುವಾಗ, ಅವರ ಮೊಗದಲ್ಲಿ ಅಭಿಮಾನವಿತ್ತು.

ದಿನಕ್ಕೆ 12 ರಿಂದ 25ರ ದಿನಗೂಲಿಯನ್ನೇ ಕೆಲಸ ಮಾಡುವವರು ಸಂಘದಲ್ಲಿ ಹಲವರು ಇದ್ದಾರೆ. ಗರಗ ಗ್ರಾಮದ ಚನ್ನವ್ವ ಕೂಡ 30 ವರ್ಷಗಳಿಂದ ಚರಕದಲ್ಲಿ ನೂಲು ತೆಗೆಯುವ, ಲಡಿ ಸಿದ್ಧಪಡಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಕನಿಷ್ಠ ಕೂಲಿಗೆ ಕೆಲಸ ಮಾಡುತ್ತಿರುವ ಬಗ್ಗೆ ಅವರಿಗೆ ಬೇಸರವಿಲ್ಲ. ಖಾದಿಯೇ ಸರ್ವಸ್ವ ಎಂಬ ನಂಬಿಕೆಯುಳ್ಳವರು ಅವರು.

‘ನಮ್ಮ ಸಂಘದಲ್ಲಿ ಕೆಲಸ ಮಾಡುವವರಲ್ಲಿ ವೃದ್ಧರ ಸಂಖ್ಯೆಯೇ ಹೆಚ್ಚಿದೆ. 40 ರಿಂದ 72 ವರ್ಷದವರೆಗಿನವರು ನಮ್ಮೊಂದಿಗೆ ಕೆಲಸ ಮಾಡುತ್ತಿದ್ದಾರೆ. 20 ರಿಂದ 30 ವರ್ಷದ ಯುವಕರು ಮಾತ್ರ ಖಾದಿ ಕೆಲಸದತ್ತ ಆಸಕ್ತಿ ತೋರುತ್ತಿಲ್ಲ. ನಾವು ಕೆಲಸ ಕೊಡಲು ಸಿದ್ಧರಿದ್ದೇವೆ. ಸೌಲಭ್ಯ ಕಲ್ಪಿಸಲು ಸಹ ಸಿದ್ಧರಿದ್ದೇವೆ. ಆದರೆ, ಯುವಜನರು ಮಾತ್ರ ಕೆಲಸಕ್ಕೆ ಬರುತ್ತಿಲ್ಲ. ಖಾದಿಯಿಂದ ನಿರುದ್ಯೋಗ ಸಮಸ್ಯೆ ನಿವಾರಣೆ ಆಗುತ್ತದೆ. ಇದರ ಬಗ್ಗೆ ಯುವಜನರು ಎಚ್ಚೆತ್ತುಕೊಳ್ಳಬೇಕು. ಇದಕ್ಕೆ ಪೂರಕವಾಗಿ ಸರ್ಕಾರವು ಸ್ಪಂದಿಸಬೇಕು’ ಎಂದು ಹೇಳುತ್ತಾರೆ ಗರಗ ಕ್ಷೇತ್ರೀಯ ಸೇವಾ ಸಂಘದ ಅಧ್ಯಕ್ಷ ಈಶ್ವರಪ್ಪ ಇಟಗಿ.